4) ಮುತ್ತಗಿ 33 ಕೆವಿ	ಕಾಮಗಾರಿಯು ಪ್ರಗತಿಯಲ್ಲಿದ್ದು, ಮೇ 2005ರಲ್ಲಿ ಮುಗಿಸಲು ಕಾರ್ಯಯೋಜನೆ ಹಾಕಿಕೊಳ್ಳಲಾಗಿದೆ.

ಈ) ಹೊಸದಾಗಿ 110 ಕೆ.ವಿ. ಮತ್ತು 33 ಕೆ.ವಿ. ಸ್ಟೇಷನ್‌ಗಳನ್ನು ಮಂಜೂರು ಮಾಡಲು ಬಂದಿರುವ ಪ್ರಸ್ತಾವನೆಗಳ ವಿವರಗಳು:

ಬಿಜಾಪುರ ತಾಲ್ಲೂಕು:

110 ಕೆ.ವಿ	ಆಲ್–ಅಮೀನ್, ಬಿಜಾಪುರ.
33 ಕೆ.ವಿ.	1. ಖತಿಜಾಪುರ 2. ನಾಗಠಾಣ

ಬಸವನ ಬಾಗೇವಾಡಿ ತಾಲ್ಲೂಕು:

ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಸದ್ಯಕ್ಕೆ ಯಾವುದೇ ಹೊಸ 110 ಕೆವಿ ಅಥವಾ 33 ಕೆವಿ. ಸ್ಟೇಷನ್ ಸ್ಥಾಪಿಸುವ ಪ್ರಸ್ತಾವನೆ ಇರುವುದಿಲ್ಲ.

ಮಂಜೂರಾತಿಗಾಗಿ ತೆಗೆದುಕೊಂಡ ಕ್ರಮಗಳ ವಿವರಗಳು:

ಬಿಜಾಪುರ ತಾಲ್ಲೂಕು:

1) ಆಲ್–ಅಮೀನ್, ಬಿಜಾಪುರ 110 ಕೆ.ವಿ.	ಈ ಪ್ರಸ್ತಾವನೆಗೆ ಕ.ವಿ.ಪ್ರ.ನಿ.ನಿ.ಯ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆಯನ್ನು ಪಡೆಯಬೇಕಾಗಿರುತ್ತದೆ. 2006–07ನೇ ಸಾಲಿನಲ್ಲಿ ಸ್ಥಾಪಿಸುವ ಪ್ರಸ್ತಾವನೆ ಇರುತ್ತದೆ.
2) ಖತಿಜಾಪುರ, 33 ಕೆ.ವಿ.	ಯೋಜನಾ ವರದಿಯನ್ನು ತಯಾರಿಸಬೇಕಾಗಿದೆ. 2005–06 ನೇ ಸಾಲಿನಲ್ಲಿ ಸ್ಥಾಪಿಸುವ ಪ್ರಸ್ತಾವನೆ ಇರುತ್ತದೆ.
3) ನಾಗಠಾಣ, 33 ಕೆ.ವಿ.	2006–07ನೇ ಸಾಲಿನಲ್ಲಿ ಸ್ಥಾಪಿಸುವ ಪ್ರಸ್ತಾವನೆ ಇರುತ್ತದೆ.

846(1456) ಶ್ರೀ ಶಿವಾನಂದ ಪಾಟೀಲ್ (ಬಸವನ ಬಾಗೇವಾಡಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಯರಗಟ್ಟಿ–ಮುಧೋಳ–ಮಂಟೂರ–ಚಿಕ್ಕಗಲಗಲಿ–ಬಬಲೇಶ್ವರ ರಾಜ್ಯ ಹೆದ್ದಾರಿ ನಂ.55ರ ಭಾಗವಾದ ಚಿಕ್ಕಗಲಗಲಿ–ಬಬಲೇಶ್ವರ ವರೆಗೆ 32.12 ಕಿ.ಮೀ. ರಸ್ತೆಯು ಸಂಪೂರ್ಣ ಹದಗೆಟ್ಟಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಾದರೆ, ಮುಖ್ಯ ರಸ್ತೆಯಾಗಿರುವ ಇದನ್ನು ಅಭಿವೃದ್ಧಿಪಡಿಸುವುದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಯಾವಾಗ ರಸ್ತೆಯನ್ನು ಅಭಿವೃದ್ದಿಪಡಿಸಲು ಪ್ರಾರಂಭಿಸಲಾಗುವುದು;

ಈ) ಅಭಿವೃದ್ದಿ ಕೆಲಸಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು;

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು ಬಂದಿರುತ್ತದೆ.

ಆ) ಸದರಿ ರಸ್ತೆ ಕಿಮೀ 0.0 ರಿಂದ 32.12 ಕಿ.ಮೀ ವರೆಗಿನ ಮೇಲೆ ಗುಂಡಿಗಳನ್ನು ತುಂಬಿ ನಿರ್ವಹಣೆ ಮಾಡಲು ರೂ. 10.00 ಲಕ್ಷಗಳ ಅನುದಾನ ನೀಡಲಾಗಿದೆ. ಗುತ್ತಿಗೆ ಕರೆಯಲಾಗಿದ್ದು ಮಾರ್ಚ್ ಅಂತ್ಯದೊಳಗಾಗಿ ಗುಂಡಿ ಕೆಲಸವನ್ನು ಪೂರ್ಣಗೊಳಿಸಲಾಗುವುದು.

ಇ) ಆರ್ಥಿಕ ವರ್ಷ 2005–08 ರವರೆಗೆ 3 ವರ್ಷದ ನಿರ್ವಹಣೆ ಅಡಿಯಲ್ಲಿ ರೂ. 100.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕೆ.ಆರ್.ಡಿ.ಸಿ.ಎಲ್. ನಿಂದ ನಿರ್ವಹಣೆ ಮಾಡಲು ಯೋಜಿಸಲಾಗಿದೆ.

ಈ) 3 ವರ್ಷಗಳ ಅವಧಿಯಲ್ಲಿ ಸದರಿ ರಸ್ತೆಯನ್ನು ನಿರ್ವಹಣೆ ಮಾಡುವ ಯೋಜನೆಯ ವೆಚ್ಚ ರೂ. 100.00 ಲಕ್ಷ ರೂ.ಗಳು.

847(1457): ಶ್ರೀ ಶಿವಾನಂದ ಪಾಟೀಲ್ (ಬಸವನ ಬಾಗೇವಾಡಿ):

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಸವನ ಬಾಗೇವಾಡಿ ಪಟ್ಟಣ ಮತ್ತು ಇಂಗಳೇಶ್ವರ ಗ್ರಾಮಗಳನ್ನು ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದಡಿ ಸೇರಿಸಲಾಗಿದೆಯೇ?

ಆ) ಪ್ರಾಧಿಕಾರದಿಂದ ಬಸವನ ಬಾಗೇವಾಡಿ ಹಾಗೂ ಇಂಗಳೇಶ್ವರ ಗ್ರಾಮಗಳಲ್ಲಿ ಯಾವ ಯಾವ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಾಗಿದೆ ಮತ್ತು ಯಾವ ಅಭಿವೃದ್ಧಿ ಕೆಲಸಗಳನ್ನು ಸೇರಿಸಿಕೊಳ್ಳಲಾಗುವುದು?

ಇ) ಪ್ರಾಧಿಕಾರದಿಂದ ಇವುಗಳಿಗೆ ಒದಗಿಸಲಾಗಿರುವ ಅನುದಾನ ಎಷ್ಟು?

ಈ) ಯಾವ ನಿರ್ದಿಷ್ಟ ಕಾಲಮಿತಿ ಹಾಕಿಕೊಂಡು ಪ್ರಾಧಿಕಾರ ಅಭಿವೃದ್ಧಿ ಗೊಳಿಸಲಾಗುವುದು?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಬಸವನಬಾಗೇವಾಡಿ ಪಟ್ಟಣ ಮತ್ತು ಇಂಗಳೇಶ್ವರ ಗ್ರಾಮವನ್ನು ಕೂಡಲಸಂಗಮ ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಸೇರಿಸಿರುವುದಿಲ್ಲ. ಆದರೆ ಸರ್ಕಾರಿ ಅಧಿಸೂಚನೆ ಸಂಖ್ಯೆ ಆರ್‌ಡಿ:67:ಆರ್‌ಇಹೆಚ್:2002 ದಿ:9–3–04 ರನ್ವಯ ಬಸವನ ಬಾಗೇವಾಡಿ ಪಟ್ಟಣದಲ್ಲಿರುವ ಶ್ರೀ ಬಸವೇಶ್ವರ ದೇವಾಲಯದ ಸಂಕೀರ್ಣ ಹಾಗೂ ಬಸವ ಸಾಂಸ್ಕೃತಿಕ ಕೇಂದ್ರ ಕಟ್ಟಡ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡು ಜಾಗವನ್ನು ಕೂಡಲಸಂಗಮ ಅಭಿವೃದ್ಧಿ ಮಂಡಳಿಯ ಹೆಚ್ಚುವರಿ ಕ್ಷೇತ್ರ ಎಂದು ಸೇರಿಸಲಾಗಿದ್ದು ಇಂಗಳೇಶ್ವರ ಗ್ರಾಮ ಯಾವುದೇ ಪ್ರದೇಶವನ್ನು ಸೇರಿಸಿರುವುದಿಲ್ಲ.

ಆ) ಬಸವನ ಬಾಗೇವಾಡಿ ಪಟ್ಟಣದಲ್ಲಿ ಕೆಳಕಂಡ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ.

1) ಬಸವ ಸಾಂಸ್ಕೃತಿಕ ಕೇಂದ್ರದ ಕಟ್ಟಡ ನಿರ್ಮಾಣ.

2) ಬಸವೇಶ್ವರ ದೇವಸ್ಥಾನದ ಸಂಕೀರ್ಣದಲ್ಲಿ 63 ಅಂಗಡಿ ಮಳಿಗೆಗಳ ಮತ್ತು ಉಪಹಾರ ಗೃಹಗಳ ನಿರ್ಮಾಣ.

3) ದೇವಸ್ಥಾನದ ಪಕ್ಕದಲ್ಲಿ ಅಂದಾಜು 2.00 ಎಕರೆ ಪ್ರದೇಶದಲ್ಲಿ ಉದ್ಯಾನವನ ನಿರ್ಮಿಸುವ ಕಾಮಗಾರಿ.